**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/15/ಇಎಸ್‌ಟಿ(1)ಬಿ/2020

ಆಯುಕ್ತರಕಛೇರಿ,
ಕಾಲೇಜುಮತ್ತುತಾಂತ್ರಿಕಶಿಕ್ಷಣಇಲಾಖೆ
ತಾಂತ್ರಿಕಭವನಅರಮನೆರಸ್ತೆ,
ಬೆಂಗಳೂರು – 560001, ದಿನಾಂಕ: 21.09.2020

**ಸುತ್ತೋಲೆ**

ವಿಷಯ: ಎಂ.ಇ/ಎಂ.ಟೆಕ್/ಪಿ.ಹೆಚ್.ಡಿ ಪದವಿ ಪಡೆದ ಬೋಧಕ ಸಿಬ್ಬಂದಿಗೆ ಎಐಸಿಟಿಇ 7ನೇ ವೇತನ ಶ್ರೇಣಿಯಲ್ಲಿ ಹೆಚ್ಚುವರಿ ವೇತನ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಟಿಇ 2019, ದಿನಾಂಕ: 24.03.2020 ಮತ್ತು ದಿನಾಂಕ: 22.04.2020
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 15 ಇಎಸ್‌ಟಿ(1)ಬಿ 2020, ದಿನಾಂಕ: 28.08.2020

***

ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ದಿನಾಂಕ:01.01.2016 ರಿಂದ ಹಾಗೂ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ದಿನಾಂಕ:01.04.2018 ರಿಂದ ಪೂರ್ವಾನ್ವಯವಾಗಿ 7ನೇ ಪರಿಷ್ಕೃತ ಎ.ಐ.ಸಿ.ಟಿ.ಇ. ವೇತನ ಶ್ರೇಣಿಗಳನ್ನು ವಿಸ್ತರಿಸಿ ಆದೇಶವಾಗಿರುತ್ತದೆ. ಆದ್ದರಿಂದ, ಎ.ಐ.ಸಿ.ಟಿ.ಇ. ಪರಿಷ್ಕೃತ ವೇತನ ಶ್ರೇಣಿಗಳ ಪೂರ್ವಾನ್ವಯ ದಿನಾಂಕ ಹಾಗೂ ಸರ್ಕಾರವು ಆದೇಶ ಹೊರಡಿಸಲಾದ ದಿನಾಂಕದ ನಡುವೆ, ಎಂ.ಇ/ಎಂ.ಟೆಕ್/ಪಿಹೆಚ್.ಡಿ. ಪದವಿ ಪಡೆದವರಿಗೆ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಸೂಕ್ತ ಆದೇಶ ಹೊರಡಿಸಿದ ನಂತರದಲ್ಲಿ ಸರ್ಕಾರದ ನಿರ್ದೇಶನದಂತೆ ಎಂ.ಇ/ಎಂ.ಟೆಕ್/ಪಿ.ಹೆಚ್.ಡಿ. ಪದವಿ ಪಡೆದವರಿಗೆ ಹೆಚ್ಚುವರಿ ವೇತನ ಬಡ್ತಿ ಗಳನ್ನು ಮಂಜೂರು ಮಾಡುವ ಕುರಿತು ಮುಂದಿನ ಕ್ರಮ ವಹಿಸಬೇಕಾಗಿರುತ್ತದೆ.

ಆದ್ದರಿಂದ ಇಂಜಿನಿಯರಿಂಗ್ ಕಾಲೇಜು ಬೋಧಕ ವರ್ಗದವರಿಗೆ ದಿನಾಂಕ:01.01.2016ಕ್ಕೆ ಮುಂಚೆ ಹಾಗೂ ಪಾಲಿಟೆಕ್ನಿಕ್ ಬೋಧಕ ವರ್ಗದವರಿಗೆ ದಿನಾಂಕ:01.04.2018ಕ್ಕೆ ಮುಂಚೆ, ಪೂರ್ವ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಪಡೆಯುತ್ತಿದ್ದ ವೇತನಕ್ಕೆ ಸಂವಾದಿಯಾಗಿ 7ನೇ ಪರಿಷ್ಕೃತ ಎ.ಐ.ಸಿ.ಟಿ.ಇ. ವೇತನ ಶ್ರೇಣಿಗಳಲ್ಲಿ ವೇತನವನ್ನು ಸದ್ಯಕ್ಕೆ ನಿಗಧಿಪಡಿಸಿ, ಅಲ್ಲಿಂದ ಮುಂದೆ ಲಭ್ಯವಾಗಬಹುದಾದ ವಾರ್ಷಿಕ ವೇತನ ಬಡ್ತಿಗಳನ್ನು ಮಾತ್ರ ಮಂಜೂರುಮಾಡಿ ವೇತನ ನಿಗದಿಪಡಿಸಲು ಸೂಚಿಸಲಾಗಿದೆ.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

**ಇವರಿಗೆ:**

ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್‌ಸಂಸ್ಥೆಗಳ ಪ್ರಾಂಶುಪಾಲರಿಗೆ.